ಕೆ.ಎಂ. ವಿಭೂತಿ, ಹರಿಹರ

*ಜೋತಿಷ್ಯ ಹೇಳುವವರ ಮುಂದೆ ಸುಂದರ ಸ್ತ್ರೀಯರ ನಿರೂಪಣೆಯ ಅಗತ್ಯವೇನಿದೆ?*



ಅದು ಆಂಗ್ಲ ಚಿತ್ರವೊಂದರ ಟೈಟಲ್‌ನ ಪ್ರಭಾವವಂತೆ – ಬ್ಯೂಟಿ ಅಂಡ್ ದ ಬೀಸ್ಟ್!

ಪಿ.ಜೆ. ರಾಘವೇಂದ್ರ, ಮೈಸೂರು

*ಸಾರ್, ಮನೆದೇವ್ರು ಎಂದರೆ ಗಂಡನೋ, ಹೆಂಡತಿಯೋ?*

ಯಾರು ಸರಿಯಾಗಿ ಮಂಗಳಾರತಿ ಮಾಡಿಸಿಕೊಳ್ಳುತ್ತಾರೋ ಅವರು.

ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

*ವೀರಶೈವ- ಲಿಂಗಾಯಿತರು ನಾವು ಒಂದೆನ್ನುತ್ತಾರೆ. ಆದರೆ ಪತ್ರಿಕೆಗಳಲ್ಲಿ ಪರಸ್ಪರ ಗುದ್ದಾಡುತ್ತಾರೆ. ಏಕೆ?*

ಒಳಗಿದ್ದಾಗ ತಂಪು; ಹೊರಗೆ ಸದ್ದೋ ಸದ್ದು ಮಾಡುವ ಏರ್ ಕಂಡೀಷನರ್ ಗುಣವನ್ನು ಅಳವಡಿಸಿಕೊಂಡಿದ್ದಾರಂತೆ.

ರತ್ನಜ, ಮೈಸೂರು

*ಗುರಿ ದಾರಿಯನ್ನು ತೋರಬೇಕೋ ಅಥವಾ ದಾರಿ ಗುರಿಯನ್ನು ತೋರಬೇಕೋ?*



ಎರಡೂ ಅಲ್ಲ; ತಲೆ ದಾರಿಯನ್ನು ತೋರಬೇಕು; ಹೃದಯ ಅನುಸರಿಸಬೇಕು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಗಂಗ, ಯಮುನ, ಸರಸ್ವತಿ ಸೇರಿದರೆ ತ್ರಿವೇಣಿ ಸಂಗಮ. ಮೂವರು ಹೆಂಗಸರು ಸೇರಿದರೆ?*

ಯಾರ ಮಾತನ್ನು ಯಾರೂ ಕೇಳದೆ ಮೂವರೂ ಒಟ್ಟಿಗೆ ಮಾತನಾಡುವುದರಿಂದ ತ್ರಿ-ವಾಣಿ ಸಂಗಮ.

ವಿ. ಹೇಮಂತಕುಮಾರ್, ಬೆಂಗಳೂರು

*ದೇವರು ಮನುಷ್ಯರ ಕಣ್ಣಿಗೆ ಕಾಣುವುದಿಲ್ಲ. ಏಕೆ ಸಾರ್?*

ಕಾಣಿಸಿಕೊಂಡರೆ ತಕ್ಷಣ ಸೆಲ್ಫಿ ಸ್ಟಿಕ್ ಹಿಡಿದು 'ಶೂಟ್ ಎಟ್ ಸೈಟ್'ಗೆ ಕ್ಯೂ ನಿಂತಾರೆಂಬ ಭಯ.

ಎಸ್.ಎನ್. ಮಹಾಬಲರಾವ್, ಅಗ್ರಹಾರ

*ಮದುವೆಯ ನಂತರ ಗಂಡಿನ ಬಾಯಿಗೆ ಬ್ರೇಕ್ ಏಕೆ?*

ಅಂದಿನವರೆಗೆ ಬಾಯ್ ಆಗಿದ್ದವನು ಅಂದಿನಿಂದ ಹಸ್ ಬಂದ್ (ನಗು ಸಮಾಪ್ತಿ) ಆಗುವುದರಿಂದ.

ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರು

*ದುಡಿಯುವ ಕೈಗಳು ನಮಿಸುವ ಕೈಗಳಿಗಿಂತ ಶ್ರೇಷ್ಠವಲ್ಲವೇನು ಸಾರ್?*

ಹೌದು. ನಮನ ಭಕ್ತಿಯ ರಸೀದಿ; ದುಡಿಮೆ ಸಾಂಗವಾದ ಪೂಜೆ.

ಫಾಲನೇತ್ರ ಸಜ್ಜನ, ಶಿರಸಿ

*ಹನುಮಂತ ಸೀತಾಮಾತೆಗೆ ಉಂಗುರದ ಬದಲು ಮೊಬೈಲ್ ನೀಡಿದ್ದಿದ್ದರೆ?*

ಪ್ರಯೋಜನವಾಗುತ್ತಿರಲಿಲ್ಲ. ಕುಂಭಕರ್ಣನ ಓಡಾಟಕ್ಕೆ ಅಡ್ಡ ಬಂದುದರಿಂದ ಟವರ್‌ಗಳೆಲ್ಲ ಧ್ವಂಸವಾಗಿದ್ದವು.

ಕೆ.ಜಿ. ಶೇಖರಪ್ಪ, ಅರಸೀಕೆರೆ

*ಜಾಹೀರಾತುಗಳ ಮಧ್ಯೆ ನಿಮ್ಮ ಪತ್ರಿಕೆಗಳಲ್ಲಿ ಸುದ್ದಿಯನ್ನು ಓದಬೇಕಾಗಿದೆ. ಏನಂತೀರಿ ಸಾರ್?*

ಗಣಪನಿಗೆ ಮೆಚ್ಚುಗೆಯಾಗುವ ಮಾತು. ಅಷ್ಟು ಗೋಧಿಹಿಟ್ಟಿನ ಮಧ್ಯೆ ಇಷ್ಟೇ ಹೂರಣವಿದ್ದರೂ ಮೋದಕದ ಸವಿಯೇ ಸವಿ!

ಕನ್ನಡತಿ ಕನ್ನಡ, ಬೆಂಗಳೂರು

*ಪ್ರಸ್ತುತ ವಿದ್ಯಮಾನದಲ್ಲಿ ಭಾಷೆ ಮತ್ತು ಧರ್ಮ ಒಂದಕ್ಕೊಂದು ಪೂರಕವೋ, ಮಾರಕವೋ?*

ಯಾವ ಭಾಷೆ? ಒಮ್ಮತದ, ಸಮ್ಮತದ ಭಾಷೆಯಾದರೆ ಪೂರಕ; ಚುನಾವಣೆಯ ಮತದ ಭಾಷೆಯಾದರೆ ಮಾರಕ.

ಜೆ. ಪ್ರದೀಪ್ ಕುಮಾರ್, ಹೂವಿನಹಡಗಲಿ

*ಪ್ರಸ್ತುತ ಭಾರತದ ರಾಜಕಾರಣದಲ್ಲಿ ಬ್ರಹ್ಮಚಾರಿಗಳೇ ಮಿಂಚುತ್ತಿರಲು ಕಾರಣವೇನು?*

ಅಂಕೆಯಲ್ಲಿಡಲು ಹೆಣ್ಣಾನೆಗಳಿಲ್ಲದಿರುವ ಸಲಗದ ಸಂಭ್ರಮವೇ ಅಂತಹದ್ದು.

## ಬಹುಮಾನಿತ ಪ್ರಶ್ನೆ

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ದೇವಾಲಯಗಳಿಗೂ, ಭೋಜನಾಲಯಗಳಿಗೂ ವ್ಯತ್ಯಾಸವೇನು ಸಾರ್?*

ದೇಗುಲದಲ್ಲಿ ಕಲ್ಲಿಗೆ ಅರ್ಚನೆ ಆಗುತ್ತದೆ; ಭೋಜನಾಲಯದಲ್ಲಿ ಕಲ್ಲು ಸಿಕ್ಕರೆ ಅಡಿಗೆಯವನಿಗೆ ಸಹಸ್ರನಾಮ ಆಗುತ್ತದೆ.

ಎಂ.ಆರ್. ಪವನಕುಮಾರ್, ಬಳ್ಳಾರಿ

*ಹಾವಿನ ದ್ವೇಷ 12 ವರ್ಷ. ಟಿವಿ ಧಾರಾವಾಹಿಗಳಲ್ಲಿ ಬರುವ ಪಿಶಾಚಿಗಳ ದ್ವೇಷ?*

ನಿರಂತರ. ಒಂದು ಸೀರಿಯಲ್‌ನಲ್ಲಿ ನಿಂತರೆ ಮತ್ತೊಂದರಲ್ಲಿ ಮುಂದುವರೆಯುತ್ತದೆ.

ಎನ್. ಗೋಪಾಲರಾವ್, ಬೆಂಗಳೂರು

*ಈ ಸಲ ರಾಖಿ ಹಬ್ಬದಂದು ಒಬ್ಬ ಹುಡುಗಿ/ಯುವತಿಯೂ ನನಗೆ ರಾಖಿ ಕಟ್ಟಲಿಲ್ಲ. ಏಕಿರಬಹುದು?*



ನಿಮ್ಮ ಪುಕ್ಕಲುತನ ಅವರಿಗೆ ತಿಳಿದುಬಿಟ್ಟಿದೆ. ಭಯಗೊಳ್ಳುವವನನ್ನು ಭಾಯೀ ಮಾಡಿಕೊಂಡರೆ ಪ್ರಯೋಜನವಿಲ್ಲವಲ್ಲ!

ನಂದ, ಯಡಿಯೂರು

*ಸಾರಕ್ಕೂ ಸಂಸಾರಕ್ಕೂ ವ್ಯತ್ಯಾಸವೇನು?*

ಸಂಸ್ಕರಣಕ್ಕೆ ಅನುಗುಣವಾಗಿ ಸಾರ; ಸಂಸ್ಕಾರಕ್ಕೆ ಅನುಗುಣವಾಗಿ ಸಂಸಾರ.

ವ. ಉಮೇಶ ಕಾರಂತ, ಮಂಗಳೂರು

*ಪ್ರೀತಿಗೂ, ಪ್ರೇತಕ್ಕೂ ಇರುವ ವ್ಯತ್ಯಾಸವೇನು?*

ಎರಡೇ ಹಂತಗಳು; ಹಂತಗಳು ಕ್ರಮವಾಗಿ ಹೀಗಿವೆ; ಪ್ರೀತಿ – ಭಗ್ನಹೃದಯ – ಆತ್ಮಹತ್ಯೆ – ಪ್ರೇತ!

ಮಲ್ಲನಗೌಡ ಪಾಟೀಲ, ರಂಭಾಪೂರ

*ಸಂಸಾರಿ ಸನ್ಯಾಸಿಯಾಗಲು ಬಯಸುತ್ತಾನೆ. ಸನ್ಯಾಸಿ ಸಂಸಾರಿಯಾಗಲು ಬಯಸುತ್ತಾನೆ. ಏಕೆ?*

ಹೆಣ್ಣೇ ಕಾರಣ; ಮೊದಲನೆಯದು ಭಯಕೆ; ಎರಡನೆಯದು ಬಯಕೆ!

■ ರಾಮ್